**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1979/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಸೋಮೇಗೌಡ ಪಿ | ಪ್ರಾಸಾ-10 |
| ತಂದೆಯ ಹೆಸರು | : ಪರ್ವತೇ ಗೌಡ | ಚಾಸಾ-18 |
| ವಯಸ್ಸು | : 55 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಸಿ.ಪಿ.ಐ. | ದಿನಾಂಕಃ 30.10.2025. |
| ವಾಸಸ್ಥಳ | : ಆಲ್ದೂರು ಪೋಲಿಸ್ ಠಾಣೆ. | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು ದಿ.10.11.2022 ರಿಂದ ದಿ.15.01.2025 ರವರೆಗೂ ಮೂಡಿಗೆರೆಯ ಪೋಲಿಸ್ ಠಾಣೆಯಲ್ಲಿ ಸಿ.ಪಿ.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.12.05.2023 ರಂದು ಪ್ರಸ್ತುತ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-17 ರವರಿಂದ ಪಡೆದುಕೊಂಡು, ಪರಿಶೀಲಿಸಿರುತ್ತೇನೆ. ಅದೇ ದಿನ ಮತ್ತೊಂದ ಕ್ರೈಂ ನಂ.52/2023 ರಲ್ಲಿ ಸದರಿ ಪ್ರಕರಣದ ತನಿಖೆಯಲ್ಲಿ ಇದ್ದ ಕಾರಣ ಪ್ರಸ್ತುತ ಪ್ರಕರಣದಲ್ಲಿ ಶವ ತನಿಖೆಯನ್ನು ಚಾಸಾ-17 ರವರೇ ಮುಂದುವರೆಸಿರುತ್ತಾರೆ. ದಿ.13.05.2023 ರಂದು ಪ್ರಸ್ತುತ ಪ್ರಕರಣದಲ್ಲಿ ಅಪಘಾತಕ್ಕೊಳಗಾದ ವಾಹನ ಮತ್ತು ಆರೋಪಿಯ ಪತ್ತೆಯ ಕುರಿತು ಬಣಕಲ್ ಠಾಣೆಯ ಸಿಬ್ಬಂಧಿಯಾದ ಮೆಹಬೂಬ್ ಎಂಬುವವರಿಗೆ ಸಿಸಿಟಿವಿ ಕ್ಯಾಮೆರಾವನ್ನು ಪರಿಶೀಲಿಸಿ ವರದಿ ನೀಡುವಂತೆ ಜ್ಞಾಪನವನ್ನು ನೀಡಿರುತ್ತೇನೆ. ಅದೇ ದಿನ ರಾ.8.00 ರ ಸಮಯಕ್ಕೆ ನಾನು ವೃತ್ತ ಕಛೇರಿಯಲ್ಲಿ ಇದ್ದ ಸಮಯದಲ್ಲಿ ಸಿಬ್ಬಂಧಿ ಮೆಹಬೂಬ್ ರವರು ಬಣಕಲ್ ಗ್ರಾಮದ ಮತ್ತಿಕಟ್ಟೆ ವೃತ್ತದಲ್ಲಿರುವ ಜಾಮೀಯ ಮಸೀದಿಯಲ್ಲಿ ಅಳವಡಿಸಿದ್ದ ಸಿಸಿ ಕ್ಯಾಮೆರಾವನ್ನು ಪರಿಶೀಲಿಸಿದ್ದು, ದಿ.12.05.2023 ರಂದು ರಾ.1.05 ರ ಸಮಯದಲ್ಲಿ ಕೊಟ್ಟಿಗೆಹಾರದ ಕಡೆಯಿಂದ ಬಂದ KA-21-C-4813 Eicher ಲಾರಿಯ ಚಾಲಕನು, ಲಾರಿಯನ್ನು ಅತಿವೇಗ ಮತ್ತು ಅಜಾಗ್ರಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆಯನ್ನು ದಾಟುತ್ತಿದ್ದ ಮಂಜುನಾಥ್ ಎಂಬುವವರಿಗೆ ಡಿಕ್ಕಿ ಹೊಡೆಸಿ, ಮೈ ಮೇಲೆ ಲಾರಿಯನ್ನು ಹತ್ತಿಸಿ, ಸದರಿ ವ್ಯಕ್ತಿಯು ತೀವ್ರ ಗಾಯದಿಂದ ಮೃತ ಪಟ್ಟಿರುವುದು ಕಂಡುಬಂದಿರುತ್ತದೆ.

ಸದರಿ ಸಿಸಿ ಕ್ಯಾಮೆರಾದ ಫುಟೇಜ್ ನ್ನು ಯತಾವತ್ತಾಗಿ ಸ್ಯಾನ್ ಡಿಸ್ಕ್ ಹೆಸರಿನ 65 ಜಿ.ಬಿ. ಪೆನ್ ಡ್ರೈವ್ ಗೆ ಅಳವಡಿಸಿ ಮತ್ತು ಸದರಿ ಪೆನ್ ಡ್ರೈವ್ ನಿಂದ ಕಂಪ್ಯೂಟರ್ ಗೆ ಅಳವಡಿಸಿ ಸಿಡಿ ಡಿಸ್ಕ್ ಗೆ ವರ್ಗಾಯಿಸಿರುವುದಾಗಿ ವರದಿಯನ್ನು ತಯಾರು ಮಾಡಿ ಹಾಜರುಪಡಿಸಿರುತ್ತಾರೆ. ಸದರಿ ಸಿಡಿಯನ್ನು ಕಂಪ್ಯೂಟರ್ ಗೆ ಹಾಕಿ ನೋಡಲಾಗಿರುತ್ತದೆ. ಆದ ಕಾರಣ ಸದರಿ ಮೆಹಬೂಬ್ ಎಂಬ ಸಿಬ್ಬಂಧಿಯಿಂದ ಕಲಂ 65 ಬಿ ರಡಿಯಲ್ಲಿ ದೃಢೀಕೃತ ಪ್ರತಿಯನ್ನು ಪಡೆದುಕೊಂಡಿರುತ್ತೇನೆ. ದಿ.14.05.2023 ರಂದು ತನಿಖೆಯನ್ನು ಮುಂದುವರೆಸಿ ನಮ್ಮ ತನಿಖಾ ಸಹಾಯಕರಾದ ಮನು ಕೆ.ಎಸ್ ಎಂಬ ಸಿಬ್ಬಂದಿಯವರೊಂದಿಗೆ ನಮ್ಮ ಇಲಾಖಾ ಜೀಪ್ ನಲ್ಲಿ ಬಣಕಲ್ ನ ಮತ್ತಿಕಟ್ಟೆ ವೃತ್ತದ ಬಳಿ ಭೇಟಿ ಮಾಡಿ ಅಪಘಾತ ಸಂಭವಿಸಿದ ಸ್ಥಳದಲ್ಲಿ ಶವವನ್ನು ಮೊದಲು ನೋಡಿದ ಸಾಕ್ಷಿದಾರರಾದ ಚಾಸಾ-11 ರವರನ್ನು ಸ್ಥಳಕ್ಕೆ ಕರೆಸಿಕೊಂಡು ಅಪಘಾತ ಸ್ಥಳದ ಪಂಚನಾಮೆಯನ್ನು

ಜರುಗಿಸಲು ಪಂಚರಾದ ಚಾಸಾ-5 ಮತ್ತು 6 ರವರನ್ನು ಸ್ಥಳಕ್ಕೆ ಬರಮಾಡಿಕೊಂಡು ಪ್ರಕರಣದ ಮಾಹಿತಿಯನ್ನು ತಿಳಿಸಿ ಮತ್ತು ನೋಟೀಸನ್ನು ಜಾರಿ ಮಾಡಿರುತ್ತೇವೆ. ನಂತರ ಪ್ರಕರಣದ ಸಾಕ್ಷಿದಾರರಾದ ಚಾಸಾ-10 ಮತ್ತು 11 ರವರನ್ನು ಬರಮಾಡಿಕೊಂಡು ಶವವು ಬಿದ್ದ ಸ್ಥಳವನ್ನು ಸದರಿ ಸಾಕ್ಷಿದಾರರು ತೋರಿಸಿದ ಮೇರೆಗೆ ಚಾಸಾ-5 ಮತ್ತು 6 ರವರ ಸಮಕ್ಷಮ ಮಹಜರ್ ಕ್ರಮವನ್ನು ಸ.4.00 ರಿಂದ 5.00 ರ ಸಮಯದವರೆಗೂ ಜರುಗಿಸಿರುತ್ತೇವೆ. ಸದರಿ ಸಮಯದಲ್ಲಿ ಕಚ್ಚಾ ನಕಾಶೆಯನ್ನು ಮತ್ತು ಫೋಟೋಗಳನ್ನು ತೆಗೆಯಲಾಗಿರುತ್ತದೆ. ಅದೇ ದಿನ ಚಾಸಾ-10 ಮತ್ತು 11 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ಸದರಿ ಪ್ರಕರಣದಲ್ಲಿ ಸಿಸಿ ಕ್ಯಾಮೆರಾ ಪರಿಶೀಲನೆಯಿಂದ ಕಂಡುಬಂದ ಅಪಘಾತ ಮಾಡಿರುವ KA-21-C-4813 Eicher ಲಾರಿಯ ಬಿ Extract ನ್ನು ಪಡೆದುಕೊಂಡು ಪರಿಶೀಲಿಸಿದಾಗ ಸದರಿ ವಾಹನವು ಚಾಸಾ-9 ರವರಿಗೆ ಸೇರಿದ್ದಾಗಿರುತ್ತದೆ ಎಂದು ಕಂಡುಬಂದಿರುತ್ತದೆ. ದಿ.16.05.2023 ರಂದು ಚಾಸಾ-9 ರವರಿಗೆ ಸದರಿ ವಾಹನದ ದಾಖಲಾತಿಯನ್ನು ಕೋರಿ, ನೋಟೀಸನ್ನು ಜಾರಿ ಮಾಡಲಾಗಿರುತ್ತದೆ. ದಿ.17.05.2023 ರಂದು ಚಾಸಾ-9 ರವರಿಗೆ ಕಲಂ 133 ರಡಿಯಲ್ಲಿ ನೋಟೀಸನ್ನು ಜಾರಿ ಮಾಡಲಾಯಿತು. ನಂತರ ಅದೇ ದಿನ ಚಾಸಾ-9 ರವರಿಂದ ಸದರಿ ನೋಟೀಸಿಗೆ ಉತ್ತರವನ್ನು ಪಡೆದುಕೊಂಡಿರುತ್ತೇವೆ. ನಂತರ ಅಪಘಾತಕ್ಕೊಳಗಾದ KA-21-C-4813 Eicher ಲಾರಿಯನ್ನು ಚಾಸ-5 ಮತ್ತು 6 ರವರ ಸಮಕ್ಷಮ ಸ.5.00 ರಿಂದ 6.00 ರ ಸಮಯದವರೆಗೂ ಬಣಕಲ್ ಠಾಣೆಯ ಆವರಣದಲ್ಲಿ ಅಮಾನತುಪಡಿಸಿಕೊಳ್ಳಲಾಗಿರುತ್ತದೆ. ನಂತರ ಆರೋಪಿಗೆ ಕಲಂ 41 ಎ ರಡಿಯಲ್ಲಿ ನೋಟೀಸನ್ನು ಜಾರಿ ಮಾಡಲಾಗಿರುತ್ತದೆ. ನಂತರ ಆರೋಪಿಯ ಸ್ವ-ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಅಮಾನತುಪಡಿಸಿಕೊಂಡಂತಹ KA-21-C-4813 Eicher ಲಾರಿಯನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 29/2023 ರಡಿಯಲ್ಲಿ ನಮೂದಿಸಲಾಗಿ, ನ್ಯಾಯಾಲಯಕ್ಕೆ ಮನವಿಯನ್ನು್ಬ ಮಾಡಿಕೊಂಡಿರುತ್ತೇನೆ.

ನಂತರ ನಷ್ಟ ಭರ್ತಿ ಪರಿಹಾರ ಪ್ರತಿಯನ್ನು ಪಡೆದುಕೊಂಡಿರುತ್ತೇನೆ. ದಿ.19.05.2023 ರಂದು ಅಮಾನತುಪಡಿಸಿಕೊಂಡ ವಾಹನದ ಕುರಿತು ವರದಿಯನ್ನು ಕೋರಿ ಚಾಸಾ-13 ರವರಿಗೆ ಮನವಿ ಪತ್ರವನ್ನು ನೀಡಿರುತ್ತೇನೆ. ನಂತರ ಚಾಸಾ-7 ಮತ್ತು 8 ರವರಿಗೆ ವಿಚಾರಣೆಯ ಸಂಬಂಧ ಕಛೇರಿಗೆ ಹಾಜರಾಗುವಂತೆ ದೂರವಾಣಿ ಮುಖಾಂತರ ತಿಳಿಸಿರುತ್ತೇನೆ. ದಿ.22.05.2023 ರಂದು ಚಾಸಾ-7 ಮತ್ತು 8 ರವರು ವೃತ್ತ ಕಛೇರಿಗೆ ಹಾಜರಾಗಿದ್ದು, ಅವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ.24.05.2023 ರಂದು ಅಮಾನತುಪಡಿಸಿಕೊಂಡ ವಾಹನದ ಮಾಲೀಕರಾದ ಚಾಸಾ-9 ರವರಿಂದ ನಷ್ಟ ಭರ್ತಿ ಪರಿಹಾರದ ಪ್ರತಿಯನ್ನು ಪಡೆದು ವಾಹನವನ್ನು ಬಿಡುಗಡೆ ಮಾಡಿರುತ್ತೇನೆ. ದಿ.26.06.2023 ರಂದು ಮೃತರ ಮರಣೋತ್ತರ ವರದಿಯನ್ನು ಚಾಸಾ-12 ರವರಿಂದ ಪಡೆದುಕೊಂಡಿರುತ್ತೇನೆ. ದಿ.19.08.2023 ರಂದು ಚಾಸಾ-13 ರವರಿಂದ IMV ವರದಿಯನ್ನು ಪಡೆದುಕೊಂಡಿರುತ್ತೇನೆ. ನಂತರ ಪ್ರಕರಣದ ತಿನಿಖೆಯು ಮುಕ್ತಾಯಗೊಂಡು ಆರೋಪಿಯ ವಿರುದ್ಧ ಆರೋಪವು ಸಾಬೀತಾದ ಕಾರಣ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ನಿಪಿ-7, 8, 9, 10 ಮತ್ತು 12 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-7(ಬಿ), ನಿಪಿ-8(ಬಿ), ನಿಪಿ-9(ಬಿ), ನಿಪಿ-10(ಡಿ) ಮತ್ತು ನಿಪಿ-12(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಚಾಸಾ-12 ರವರಿಂದ ಸ್ವೀಕರಿಸಿದ ಶವ ಪರೀಕ್ಷಾ ವರದಿಯನ್ನು ಮತ್ತು ಅದರಲ್ಲಿರುವ ಸಾಕ್ಷಿಯು ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ವರದಿಯನ್ನು ನಿಪಿ-17 ಮತ್ತು ಸಾಕ್ಷಿಯು ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು. ಚಾಸಾ-13 ರವರಿಂದ ಪಡೆದ IMV ವರದಿ ಮತ್ತು ಅದರಲ್ಲಿರುವ ಸಾಕ್ಷಿಯು ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ವರದಿಯನ್ನು ನಿಪಿ-18 ಮತ್ತು ಸಾಕ್ಷಿಯು ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು. ದಿ.15.07.2023 ರಂದು ಆರೋಪಿಯ ಸ್ವ-ಇಚ್ಛಾ ಹೇಳಿಕೆ ಮತ್ತು ಅದರಲ್ಲಿರವ ಸಾಕ್ಷಿಯು ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಹೇಳಿಕೆಯನ್ನು ನಿಪಿ-19 ಮತ್ತು ಸಾಕ್ಷಿಯು ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು. ಚಾಸಾ-5 ರವರು ನಿಪಿ-13 ರಂತೆ, ಚಾಸಾ-6 ರವರು ನಿಪಿ-14 ಮತ್ತು 15 ರಂತೆ ನನ್ನ ಮುಂದೆ ಹೇಳಿಕೆಯನ್ನು ನೀಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ನಿಪಿ-2 ಮತ್ತು 3 ರಲ್ಲಿ ಕಂಡುಬರುವ ಲಾರಿಯನ್ನು ನೋಡಿ, ಆ ದಿನ ಅಮಾನತುಪಡಿಸಿಕೊಂಡ ಲಾರಿ ಇದೆ ಎಂದು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಎ.ಎಂ. ವಕೀಲರಿಂದಃ**

ದಿ.12.05.2023 ರಂದು ಚಾಸಾ-17 ರವರಿಂದ ಪಡೆದ ಯಾವ ಸಮಯದಲ್ಲಿ ಕಡತವನ್ನು ಪಡೆದುಕೊಂಡಿರುತ್ತೇನೆ ಎಂದು ನೆನಪಾಗುತ್ತಿಲ್ಲ. ಒಂದು ವೇಳೆ ಖಚಿತವಾಗಿ ದಿನಾಂಕ ನೆನಪಿದ್ದಲ್ಲಿ ನಾನು ನನ್ನ ವರದಿಯಲ್ಲಿ ನಮೂದಿಸುತ್ತಿದ್ದೆ ಎಂದರೆ ಸಾಕ್ಷಿಯು ದಿನಾಂಕ ನೆನಪಿದೆ ಎಂದು ನುಡಿಯುತ್ತಾರೆ. ಚಾಸಾ-17 ರವರಿಂದ ಕಡತವನ್ನು ಪಡೆದುಕೊಂಡಿರುವ ಬಾಬ್ತು ಕೇಸ್ ಡೈರಿಯಲ್ಲಿ ಚರ್ಚಿಸಿರುತ್ತೇವೆ. ನಿರ್ದಿಷ್ಟವಾಗಿ ಇಂತದ್ದೇ ಸಮಯದಲ್ಲಿ ಕಡತವನ್ನು ಚಾಸಾ-17 ರವರಿಂದ ಪಡೆದುಕೊಂಡಿರುತ್ತೇನೆ ಎಂದು ಕೇಸ್ ಡೈರಿಯಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರಕರಣದ ಕಡತವನ್ನು ಪಡೆದುಕೊಂಡ ನಂತರ ಶವ ಪರೀಕ್ಷೆಗಾಗಿ ಚಾಸಾ-17 ರವರಿಗೆ ಪ್ರಕರಣದ ಕಡತವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಸಿಬ್ಬಂದಿ ಮೆಹಬೂಬ್ ಎಂಬುವವರಿಗೆ ಯಾವುದೇ ಜ್ಞಾಪನ ಪತ್ರವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಜುಮ್ಮಾ ಮಸೀದಿಯು ಮುಖ್ಯ ರಸ್ತೆಯಿಂದ ಒಳಗಿದೆ ಎಂದರೆ ಸರಿಯಲ್ಲ. ಸಿಬ್ಬಂದಿ ಮೆಹಬೂಬ್ ಎಂಬುವವರು ಯಾವುದೇ ರೀತಿಯ ವರದಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಿ.12.05.2023 ರಂದು ರಾ.1.05 ರ ಸಮಯಕ್ಕೆ ಆರೋಪಿಯು Eicher ಲಾರಿಯನ್ನು ಅತಿವೇಗ ಮತ್ತು ಅಜಾಗ್ರಕತೆಯಿಂದ ಕೊಟ್ಟಿಗೆಹಾರದಿಂದ ಮೂಡಿಗೆರೆಗೆ ಬರುವ ರಸ್ತೆಯಲ್ಲಿ ಚಲಾಯಿಸಿರುವುದಿಲ್ಲ ಎಂದರೆ ಸರಿಯಲ್ಲ.

ಮೂಡಿಗೆರೆಯಿಂದ ಉಜಿರೆಯ ವರೆಗೂ ಬೆಳಗಿನ ಜಾವದಲ್ಲಿ ಮಂಜು ಆವರಿಸಿದ ಕಾರಣ ಸಿಸಿ ಕ್ಯಾಮೆರಾದಲ್ಲಿ ಸರಿಯಾಗಿ ಕಾಣಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ರಸ್ತೆಯಲ್ಲಿ ಅತಿಯಾದ ವಾಹನಗಳು ಸಂಚಾರ ಮಾಡುವ ಕಾರಣ ಕ್ಯಾಮೆರಾದ ಮೇಲೆ ಧೂಳು ಬಿದ್ದ ಕಾರಣ

ಸ್ಪಷ್ಟವಾಗಿ ಏನು ಕಂಡುಬರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತ ಮಾಡಿದಂತ ವಾಹನ ಎಂದು ಹೇಳಿರುವ KA-21-C-4813 ಸಂಖ್ಯೆಯು ವಾಹನವು ಆ ದಿನ ಆ ರಸ್ತೆಯಲ್ಲಿ ಸಂಚಾರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಸದರಿ ರಸ್ತೆಯಲ್ಲಿ ನಮ್ಮ ಸಿಬ್ಬಂದಿಗಳು ರಾತ್ರಿ ವೇಳೆಯಲ್ಲಿ ಅಡ್ಡಗಟ್ಟಿ ದುಡ್ಡು ಕೇಳುವ ಕುರಿತು ಮಾಡಿದ Strike ನಲ್ಲಿ ಆರೋಪಿಯು ಭಾಗಿಯಾಗಿದ್ದ ಕಾರಣ ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾನ್ ಡಿಸ್ಕ್ ಯಾವ ವರ್ಷದ ಮಾದರಿ ಎಂದು ನಮೂದು ಮಾಡಿರುವುದಿಲ್ಲ. ನಾನು ಆ ರೀತಿಯಾಗಿ ಸಾನ್ ಡಿಸ್ಕ್ ನಲ್ಲಿ ಅಳವಡಿಸಿದ್ದೇ ಆಗಿದ್ದಲಿ ಅದರ ರೀತಿಯ ಬಗ್ಗೆ ವರದಿಯಲ್ಲಿ ನಮೂದಿಸುತ್ತಿದ್ದೆ ಎಂದರೆ ನಾನು ಆ ರೀತಿಯಾಗಿ ಅಳವಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಚಾಸಾ-10 ಮತ್ತು 11 ರವರಿಗೆ ಶವ ದೊರೆತ ಜಾಗಕ್ಕೆ ಬರವಂತೆ ತಿಳಿಸಿರುವುದಿಲ್ಲ ಮತ್ತು ಚಾಸಾ-5 ಮತ್ತು 6 ರವರಿಗೆ ಯಾವುದೇ ನೋಟೀಸನ್ನು ಜಾರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಚಾಸಾ-5 ಮತ್ತು 6 ರವರಿಗೆ ಕೃತ್ಯ ಸ್ಥಳದ ಮಹಜರ್ ಬಗ್ಗೆ ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-10 ಮತ್ತು 11 ರವರಿಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳದ ಮಹಜರ್ ಸಮಯದಲ್ಲಿ ಚಾಸಾ-5 ಮತ್ತು 6 ರವರ ಹಾಜರಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಯಾವುದೇ ನಕಾಶೆಯನ್ನು ತಯಾರಿಸಿ, ಫೋಟೋಗಳನ್ನು ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-5 ಮತ್ತು 6 ರವರ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಅಮಾನತುಪಡಿಸಿಕೊಂಡ ವಾಹನದ ಬಿ Extract ನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-13 ರವರಿಗೆ ನೀಡಿದ ಮನವಿ ಪತ್ರವನ್ನು ಪ್ರಕರಣದಲ್ಲಿ ಹಾಜರುಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-9 ರವರಿಗೆ ವಾಹನದ ದಾಖಲಾತಿಯನ್ನು ಕೋರಿ ಮನವಿ ಪತ್ರವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಕಲಂ 133 ರಡಿಯಲ್ಲಿ ಚಾಸಾ-9 ರವರಿಗೆ ನೋಟೀಸನ್ನು ಜಾರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-5 ಮತ್ತು 6 ರವರ ಸಮಕ್ಷಮ ವಾಹನವನ್ನು ಅಮಾನತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಯಾವುದೇ ನೋಟೀಸನ್ನು ಜಾರಿ ಮಾಡಿರುವುದಿಲ್ಲ ಮತ್ತು ಅವರಿಂದ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಅಮಾನತುಪಡಿಸಿಕೊಂಡ ವಾಹನಕ್ಕೆ ಠಾಣಾ.ಮಾ.ಸಂಖೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-7 ಮತ್ತು 8 ರವರಿಗೆ ಯಾವ ಸಮಯದಲ್ಲಿ ಮಾಹಿತಿಯನ್ನು ನೀಡಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ. ನಾನು ಚಾಸಾ-7 ಮತ್ತು 8 ರವರ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-9 ರವರಿಂದ ರೂ.100/- ಗಳ ನಷ್ಟ ಭರ್ತಿ ಪರಿಹಾರದ ಪ್ರತಿಯನ್ನು ಪಡೆದುಕೊಂಡಿರುತ್ತೇನೆ. ನಾನು ಆ ರೀತಿಯಾಗಿ ಯಾವುದೇ ಪ್ರತಿಯನ್ನು ಚಾಸಾ-9 ರವರಿಂದ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಬಾಂಡ್ ಚಾಸಾ-9 ರವರ ಹೆಸರಿನಲ್ಲಿತ್ತು. ಚಾಸಾ-12 ರವರಿಂದ ಯಾವುದೇ ಮರಣೋತ್ತರ ವರದಿಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದ ಬಾಬ್ತು ಯಾವುದೇ ವೈದ್ಯಾಧಿಕಾರಿಗಳು ಯಾವುದೇ ಧೃಢೀಕೃತ ಪ್ರತಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಚಾಸಾ-13 ರವರಿಂದ ಯಾವುದೇ ರೀತಿಯ ವರದಿಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರಸ್ತುತ ಪ್ರಕರಣದಲ್ಲಿ ಯಾವುದೇ ವ್ಯಕ್ತಿಗಳ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಮತ್ತು ಯಾವುದೇ ತನಿಖೆಯನ್ನು ಕೈಗೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಈ ಹಿಂದಿನಿಂದಲೂ ಲಾರಿ ಚಾಲಕರು ಮತ್ತು ಬಣಕಲ್ ಪೋಲಿಸ್ ಠಾಣೆಯ ಸಿಬ್ಬಂದಿಗಳ ನಡುವೆ ವೈಮನಸ್ಸಿರುತ್ತದೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.